**ಸಾಕ್ಷಿಯನ್ನು ದಿಃ *02/04/2026* ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆ ಃ ಅರ್ಜಿದಾರರ ಪರ ವಕೀಲರಿಂದ.**

ನಾನು ಮುಖ್ಯ ವಿಚಾರಣೆಯಾಗಿ ನನ್ನ ಪ್ರಮಾಣಪತ್ರವನ್ನು ಸಲ್ಲಿಸಿದ್ದೇನೆ. ಅದರಲ್ಲಿನ ಸಂಗತಿಗಳು ಸತ್ಯವಾಗಿವೆ.

ನಾನು ನ್ಯಾಯಾಲಯಕ್ಕೆ ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸುತ್ತಿದ್ದೇನೆ.

| ಅ.ನಂ. | ದಾಖಲೆಗಳು |
|---|---|
| ನಿ.ಪಿ.7 | ಅಂಗನ್ಯೂನತೆ ಪ್ರಮಾಣಪತ್ರ ಮತ್ತು ಗಾಯಾಳುವಿನ ಓಪಿಡಿ ಚೀಟಿ (ಒಟ್ಟಾಗಿ) |

**ಪಾಟೀ ಸವಾಲು ಃ ಶ್ರೀ ಎನಎಂಬಿ ವಕೀಲರಿಂದ 2 ನೇ ಎದುರುದಾರರ ಪರವಾಗಿ.**

ಗಾಯಾಳು ಮೊದಲು ಯಲ್ಲಾಪೂರ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ನಂತರ ಹುಬ್ಬಳ್ಳಿಯ ಕಿಮ್ಸಗೆ ಬಂದಿರುತ್ತಾರೆ. ನಮ್ಮ ಯುನಿಟನಲ್ಲಿ ಗಾಯಾಳುವಿಗೆ ಪಾದದ ಭಾಗಕ್ಕೆ ಶಸ್ತ್ರಚಿಕಿತ್ಸೆ ಮಾಡಲಾಗಿತ್ತು. ಕಿಮ್ಸ ಆಸ್ಪತ್ರೆಗೆ ಗಾಯಾಳು ದಾಖಲಾದಾಗ ನಾನು ಸ್ವತ ಅವರಿಗೆ ಚಿಕಿತ್ಸೆ ನೀಡಿಲ್ಲ ಎಂದರೆ ನಿಜ. ಈ ರೀತಿ ನಮ್ಮ ಯುನಿಟನವರ ಯಾರು ಚಿಕಿತ್ಸೆ ಕೊಟ್ಟಿದ್ದಾರೆ ಎಂದು ನನಗೆ ಹೇಳಲು ಬರುವುದಿಲ್ಲ. ಸಾಮಾನ್ಯವಾಗಿ ಡಿಸಚಾರ್ಜ ಮಾಡಬೇಕಾದರೆ ಗಾಯಾಳುವಿನ ದೈಹೀಕ ತಪಾಸಣೆ ಮತ್ತು ಎಕ್ಸರೆ ಮಾಡಿ ಮಾಡಲಾಗುತ್ತದೆ ಎಂದರೆ ನಿಜ. ಡಿಸಚಾರ್ಜ ಸಮಯದಲ್ಲಿ ಗುಣಮುಖ ಹೊಂದುತ್ತಿದ್ದವು ಎಂದು ನಮೂದಿಸಲಾಗಿದೆ ಎಂದರೆ ನಿಜ. ಸದರಿ ಎಕ್ಸರೆಯನ್ನು ನಾನು ನೋಡಿದ್ದೇನೆ. ಸದರಿ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ರೀತಿ ಅಡಚಣೆವಿಲ್ಲ ಎಂದರೆ ನಿಜ. ಅದರಂತೆ ಮೂಳೆ ಮುರಿತ ಸಹ ಜೋಡಣೆಯಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಗಾಯಾಳುವನ್ನು ದಿಃ14-10-2025 ರಂದು ತಪಾಸಣೆ ಮಾಡಿದಾಗ ಮೂಳೆ ಮುರಿತ ಇನ್ನೂ ಜೋಡಣೆಯಾಗದೇ ಇರುವುದು ಕಂಡು ಬಂದಿರುತ್ತದೆ. ಎಕ್ಸರೆ ನೋಡಿದರೆ ಮೂಳೆ ಮುರಿತ ಜೋಡಣೆಯಾಗಿದೆ ಇಲ್ಲವೊ ಎಂದು ಗೊತ್ತಾಗುತ್ತದೆ ಎಂದರೆ ನಿಜ. ಸದರಿ ಎಕ್ಸರೆಯಲ್ಲಿ ಯಾವುದಾದರೂ ನ್ಯೂನತೆಗಳು ಕಂಡುಬಂದರೆ ಅದನ್ನು ಡಿಸಚಾರ್ಜ ಸಮರಿಯಲ್ಲಿ ನಮೂದು ಮಾಡಲಾಗುತ್ತದೆ ಎಂದರೆ ನಿಜ. ಸದರಿ ಡಿಸಚಾರ್ಜ ಸಮರಿಯಲ್ಲಿ ಇನ್ನೂ ಮೂಳೆ ಮುರಿತ ಜೋಡಣೆಯಾಗಿಲ್ಲ ಎಂದು ಉಲ್ಲೇಖಿಸಿಲ್ಲ ಎಂದರೆ ಸರಿಯಲ್ಲ.

ನಾನು ಅಂಗನ್ಯೂನತೆ ಪ್ರಮಾಣಪತ್ರ ನೀಡಿರುವ ದಿನಾಂಕದಲ್ಲಿ ಗಾಯಾಳು ಅದಕ್ಕಿಂತ ಮುಂಚಿತವಾಗಿ ನಮ್ಮ ಕಿಮ್ಸ ಆಸ್ಪತ್ರೆಗೆ ಮುಂದುವರೆದ ಚಿಕಿತ್ಸೆಗಾಗಿ ಬಂದಿದ್ದರು ಇಲ್ಲವೊ ಎಂದು ನಾನು ತಿಳಿದುಕೊಂಡಿಲ್ಲ. ಸದರಿ ದಿನಾಂಕದಂದು ನಾನು ದೈಹೀಕ ತಪಾಸಣೆ ಮತ್ತು ಎಕ್ಸರೆಗಳನ್ನು ತೆಗೆದಿರುತ್ತೇನೆ. ಸದರಿ ಎಕ್ಸರೆ ಮತ್ತು ವರದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ತೊಂದರೆ ಇಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ಸದರಿ ಎಕ್ಸರೆಗಳು ಡಿಜಿಟಲ ಆಗಿ

ಸಿಗಬಹುದು ಎಂದು ಉತ್ತರಿಸುತ್ತಾರೆ. ಎಕ್ಸರೆ ಜೊತೆಗೆ ಲಗತ್ತಿಸಿದ ವರದಿಯಲ್ಲಿ ಮೂಳೆ ಮುರಿತ ಜೋಡಣೆಗಳ ಕುರಿತು ಉಲ್ಲೇಖಿಸಿರುತ್ತಾರೆ ಎಂದರೆ ನಿಜ.

ನನ್ನ ಪ್ರಮಾಣಪತ್ರದಲ್ಲಿ ಗಾಯವಾಗದ ಎಡಗಾಲಿನ ಚಲನ ವಲನಗಳನ್ನು ತುಲನೆ ಮಾಡಿರುವ ಕುರಿತು ಬರೆದಿಲ್ಲ ಎಂದರೆ ನಿಜ. ಈ ರೀತಿ ಗಾಯವಾದ ಕಾಲಿನ ಚಲನ ವಲನಗಳನ್ನು ಬೇರೆ ಕಾಲಿನೊಂದಿಗೆ ತುಲನೆ ಮಾಡಿ ನೋಡಿ ನ್ಯೂನತೆ ಮಾಡಬೇಕಾಗುತ್ತದೆ ಎಂದರೆ ನಿಜ. ನಾನು ಸರಿಯಿದ್ದ ಕಾಲಿನ ಚಲನ ವಲನಗಳನ್ನು ತಿಳಿದುಕೊಳ್ಳದೆ ಗಾಯಾವಾದ ಕಾಲಿನ ನ್ಯೂನತೆ ಪ್ರಮಾಣವನ್ನು ಲೆಕ್ಕಾಚಾರ ಮಾಡಿದ್ದೇನೆ ಎಂದರೆ ಸರಿಯಲ್ಲ. ಗಾಯಾಳುವಿಗೆ ಒಳಗಡೆ ಯಾವುದೇ ರೀತಿ ಉಪಕರಣಗಳನ್ನು ಜೋಡಿಸಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ಹೊರಗಡೆಯಿಂದ ಜೋಡಿಸಿದ್ದು, ಈಗ ತೆಗೆದು ಹಾಕಲಾಗಿದೆ ಎಂದು ಉತ್ತರಿಸುತ್ತಾರೆ. ಗಾಯಾಳುವಿನ ಮೂಳೆ ಮುರಿತ ಜೋಡಣೆಯಾಗಿದ್ದರು ಸಹ ಸದರಿಯವರಿಗೆ ಪರಿಹಾರ ಹಣ ಸಿಗಲಿ ಎಂದು ಈ ರೀತಿ ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಕಿಮ್ಸ ಆಸ್ಪತ್ರೆಯಲ್ಲಿ ಅಂಗನ್ಯೂನತೆ ಲೆಕ್ಕಾಚಾರ ಮಾಡಲು ಪ್ರತ್ಯೇಕ ವಿಭಾಗವಿರುತ್ತದೆ ಎಂದರೆ ನಿಜ. ಆದ್ದರಿಂದ ನನಗೆ ಸದರಿ ಅಂಗನ್ಯೂನತೆ ಪ್ರಮಾಣಪತ್ರ ಒದಗಿಸುವ ಅಧಿಕಾರವಿಲ್ಲ ಎಂದರೆ ಸರಿಯಲ್ಲ. ನಾನು ನೀಡಿರುವ ನ್ಯೂನತೆ ಪ್ರತಿಶತ ಪ್ರತೇಕ ಅಂಗಕ್ಕೆ ಇರುತ್ತದೆ ಎಂದರೆ ನಿಜ. ಸದರಿ ನ್ಯೂನತೆ ಪ್ರತಿಶತ ಒಟ್ಟು ಶರೀರಕ್ಕೆ ಹೊಲಿಸಿದರೆ ಕಡಿಮೆ ಆಗುತ್ತದೆ ಎಂದರೆ ಆಗಬಹುದು. ಇತ್ತೀಚಿಗೆ ಬಂದ ಲೆಕ್ಕಾಚಾರ ಗಣನೇಗೆ ಪಡೆದರೆ ಸದರಿ ಅಂಗಕ್ಕೆ ನಾನು ಕೊಟ್ಟಿರುವ ಪ್ರತಿಶತ ಇನ್ನೂ ಕಡಿಮೆಯಾಗುತ್ತದೆ ಎಂದರೆ ಸರಿಯಲ್ಲ. ಗಾಯಾಳು ಈ ಮೊದಲಿನಂತ ಸರಳವಾಗಿ ಮಾಡುತ್ತಿದ್ದರು ಸಹ ಅವರಿಗೆ ಶಾಶ್ವತ ನ್ಯೂನತೆ ಇದೆ ಎಂದು ಸುಳ್ಳು ಪ್ರಮಾಣಪತ್ರದ ಮೂಲಕ ಹೆಚ್ಚಿನ ನ್ಯೂನತೆ ಪ್ರತಿಶತ ಒದಗಿಸಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

***ಮರು ವಿಚಾರಣೆ : ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.